**ಕರ್ನಾಟಕ ವಿಧಾನ ಪರಿಷತ್ತು**

**ನೂರ ಐವತ್ತೆರಡನೆಯ ಅಧಿವೇಶನ**

# ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–24)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 94ಎನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ 94ಎ ಪ್ರಕರಣದಲ್ಲಿ,

(i) (1)ನೇ ಉಪಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು,-

(i) ಸಂಬಂಧಿತ ವಿಧಾನ ಸಭಾ ಕ್ಷೇತ್ರದ ವಿಧಾನ ಸಭೆಯ ಸದಸ್ಯರು ಸಮಿತಿಯ ಸದಸ್ಯರಾಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಅಥವಾ ಇಚ್ಛಿಸಿರುವುದಿಲ್ಲವೆಂದು ಲಿಖಿತದಲ್ಲಿ ಸೂಚಿಸಿದ್ದರೆ, ಅಥವಾ

(ii) ಆ ವಿಧಾನ ಸಭಾ ಕ್ಷೇತ್ರದಲ್ಲಿ ವಿಧಾನ ಸಭೆಯ ಸದಸ್ಯರ ಹುದ್ದೆಯು ಖಾಲಿಯಿದ್ದರೆ ಅಂಥ ವಿಧಾನ ಸಭಾ ಕ್ಷೇತ್ರದ ಸಮಿತಿಯ ಸದಸ್ಯನನ್ನಾಗಿ ರಾಜ್ಯ ಸರ್ಕಾರವು ಯಾರೇ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಬಹುದು."

(ii) (2)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ರಾಜ್ಯ ಸರ್ಕಾರವು, ಜನಸಂಖ್ಯೆಯ ಆಧಾರದಲ್ಲಿ ವಿಧಾನ ಸಭೆಯ ಕ್ಷೇತ್ರದ ಪ್ರಮುಖ ಭಾಗವನ್ನು ಹೊಂದಿರುವ ತಾಲ್ಲೂಕಿನ ತಹಶಿಲ್ದಾರನನ್ನು ಸಮಿತಿಯ ಸದಸ್ಯನನ್ನಾಗಿ ನೇಮಿಸತಕ್ಕದ್ದು."

(iii) (2ಎ) ಉಪಪ್ರಕರಣದಲ್ಲಿ,-

(ಎ) "ತಾಲ್ಲೂಕಿಗೆ" ಎಂಬ ಪದದ ಬದಲಿಗೆ "ವಿಧಾನ ಸಭಾ ಕ್ಷೇತ್ರಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) "ಹಾಗೂ ಇನ್ನೊಬ್ಬರನ್ನು ಸಮಿತಿಯ ಕಾರ್ಯದರ್ಶಿಯಾಗಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ಸಿ) "ಡೆಪ್ಯೂಟಿ ಕಮಿಷನರ್‌ನು" ಎಂಬ ಪದಗಳ ಬದಲಾಗಿ "ರಾಜ್ಯ ಸರ್ಕಾರವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) (4)ನೇ ಉಪಪ್ರಕರಣದಲ್ಲಿ "ಅಥವಾ ಅದರ ಭಾಗವನ್ನು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(v) (4)ನೇ ಉಪಪ್ರಕರಣದ ಮೊದಲನೇ ಪರಂತುಕದಲ್ಲಿ "ವ್ಯಕ್ತಿಯು" ಎಂಬ ಪದದ ಬದಲಾಗಿ "ಕುಟುಂಬವು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಅಧಿನಿಯಮದ 94ಎ (1)ನೇ ಪ್ರಕರಣದ ಹಾಲಿ ಉಪಬಂಧವು ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೃಷಿ ಭೂಮಿಯ ಅನಧಿಕೃತ ಬೇಸಾಯವನ್ನು ಸಕ್ರಮಗೊಳಿಸಲು ರಚಿಸಿದ ಸಮಿತಿಗೆ (ಬಗರ್ ಹುಕುಂ ಸಮಿತಿ) ವಿಧಾನ ಸಭಾ ಸದಸ್ಯರನ್ನು ಸಮಿತಿಯ ಒಬ್ಬ ಸದಸ್ಯನಾಗಿರಲು ಉಪಬಂಧ ಕಲ್ಪಿಸಿದೆ.

ಆದರೆ, ಕೆಲವು ಪ್ರಕರಣಗಳಲ್ಲಿ ಸಂಬಂಧಪಟ್ಟ ವಿಧಾನ ಸಭಾ ಕ್ಷೇತ್ರದ ಸದಸ್ಯರು ಸಮತಿಯ ಸದಸ್ಯನಾಗಲು ಇಚ್ಛಿಸಿರುವುದಿಲ್ಲ ಅಥವಾ ವಿಧಾನ ಸಭಾ ಸದಸ್ಯ ಸ್ಥಾನವು ಖಾಲಿಯಾಗಿದ್ದರೆ, ಆಗ ಸಮಿತಿಯ ರಚನೆಯು ವಿಳಂಬವಾಗುತ್ತದೆ. ಮಾನ್ಯ ಉಚ್ಚ ನ್ಯಾಯಾಲಯವು ಸರ್ಕಾರಿ ಭೂಮಿಯ ಒತ್ತುವರಿ ತೆರವುಗೊಳಿಸುವದನ್ನು ಗಂಭೀರವಾಗಿ ಪರಿಗಣಿಸಿದೆ ಹಾಗೂ ಸಮಿತಿಯನ್ನು ತಕ್ಷಣವೇ ರಚಿಸುವಂತೆ ನಿರ್ದೇಶಿಸಿದೆ.

ಆದ್ದರಿಂದ ರಾಜ್ಯ ಸರ್ಕಾರವು ಸದರಿ ಸಮಿತಿಗೆ ಯಾರೇ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರ 94ಎ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ (1964ರ ಕರ್ನಾಟಕ ಅಧಿನಿಯಮ 12ರ) ಉದ್ಧೃತ ಭಾಗ

**XX XX XX**

**94ಎ. ಸಮಿತಿ, ಮುಂತಾದವನ್ನು ರಚಿಸುವ ಮೂಲಕ ಅನಧಿಕೃತ ಅಧಿಭೋಗದ ಕೆಲವು ಪ್ರಕರಣಗಳನ್ನು ಸಕ್ರಮಗೊಳಿಸುವುದು.**-(1) ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, (4)ನೇ ಉಪಪ್ರಕರಣದ ಮೇರೆಗೆ ಭೂ ಮಂಜೂರಾತಿಯ ಉದ್ದೇಶಕ್ಕಾಗಿ ಒಬ್ಬರು ವಿಧಾನಸಭೆಯ ಸದಸ್ಯರನ್ನು ಒಳಗೊಂಡ ಐದು ಸದಸ್ಯರನ್ನು ಮೀರದಂಥ ಸಮಿತಿಯನ್ನು ವಿಧಾನಸಭೆಯ ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕೆ ರಚಿಸತಕ್ಕದ್ದು.

(2) ಸಂಬಂಧಪಟ್ಟ ತಾಲೂಕಿನ ತಹಶಿಲ್ದಾರನು ಸಮಿತಿಯ ಕಾರ್ಯದರ್ಶಿಯಾಗಿರತಕ್ಕದ್ದು.

(2ಎ) ಉಪ-ಪ್ರಕರಣ(4)ರ ಮೇರೆಗೆ ಭೂಮಿಯನ್ನು ಮಂಜೂರು ಮಾಡುವ ಉದ್ದೇಶಕ್ಕಾಗಿ ತಾಲೂಕಿಗೆ ಒಂದಕ್ಕಿಂತ ಹೆಚ್ಚಿಗೆ ಸಮಿತಿಗಳನ್ನು ರಚಿಸುವುದು ಅವಶ್ಯಕವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂತೆ, ಐವರನ್ನು ಮೀರದ ಸದಸ್ಯರನ್ನೊಳಗೊಂಡ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಸಮಿತಿಗಳನ್ನು ರಚಿಸಬಹುದು ಮತ್ತು ರಾಜ್ಯ ಸರ್ಕಾರವು, ಸದಸ್ಯರ ಪೈಕಿಯಿಂದ ಒಬ್ಬರನ್ನು ಅಧ್ಯಕ್ಷರನ್ನಾಗಿ ಹಾಗೂ ಇನ್ನೊಬ್ಬರನ್ನು ಸಮಿತಿಯ ಕಾರ್ಯದರ್ಶಿಯನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದು. ಒಂದು ಹೆಚ್ಚುವರಿ ಸಮಿತಿಯನ್ನು ರಚಿಸಿದಾಗ, ಡೆಪ್ಯೂಟಿ ಕಮಿಷನರ್‌ನು, ಸಮಿತಿಯ ಹಾಗೂ ಹೆಚ್ಚುವರಿ ಸಮಿತಿಯು ಕಾರ್ಯವ್ಯಾಪ್ತಿಯನ್ನು ನಿರ್ಧರಿಸತಕ್ಕದ್ದು ಹಾಗು ಸಂಬಂಧಪಟ್ಟ ಸಮಿತಿಗೆ ಬಾಕಿಯಿರುವ ವಿಷಯಗಳನ್ನು ವರ್ಗಾವಣೆ ಮಾಡತಕ್ಕದ್ದು.

(3) ಸಮಿತಿಯು ಅಥವಾ ಹೆಚ್ಚುವರಿ ಸಮಿತಿಯು ಗೊತ್ತುಪಡಿಸಬಹುದಾದಂಥ ಕಾರ್ಯ ವಿಧಾನವನ್ನು ಅನುಸರಿಸತ್ಕದ್ದು.

(4) 2005ನೇ ಜನವರಿ ಒಂದನೇ ದಿನಾಂಕಕ್ಕೆ (ಇಲ್ಲಿ ಇನ್ನು ಮುಂದೆ ಸದರಿ ದಿನಾಂಕವೆಂದು ಉಲ್ಲೇಖಿಸಿದೆ) ಮುಂಚೆ ಯಾರೇ ವ್ಯಕ್ತಿಯು ಭೂಮಿಯನ್ನು ಅಥವಾ ಅದರ ಭಾಗವನ್ನು ಅನಧಿಕೃತವಾಗಿ ಸ್ವಾಧೀನ ಹೊಂದಿದ್ದು, ಆ ಪ್ರಕರಣದ ಮೇರೆಗೆ ಹೊರದೂಡಲು ಅರ್ಹನಾಗಿದ್ದರೆ ಮತ್ತು ಗೊತ್ತುಪಡಿಸಿದ ಷರತ್ತುಗಳನ್ನು (ಅವನು ಹೊಂದಿರುವ ಹಾಗೂ ಅನಧಿಕೃತವಾಗಿ ಅಧಿಭೋಗಿಸಿದ ಭೂಮಿಯ ವಿಸ್ತೀರ್ಣವು ಒಳಗೊಂಡು) ಅವನು ಈಡೇರಿಸಿದರೆ, (1)ನೇ ಉಪ-ಪ್ರಕರಣದ ಮೇರೆಗೆ ರಚಿಸಿದ ಸಮಿತಿಯು ಅಥವಾ (2ಎ) ಉಪ ಪ್ರಕರಣದ ಮೇರೆಗೆ ರಚಿಸಿದ ಹೆಚ್ಚುವರಿ ಸಮಿತಿಯು, ಗೊತ್ತುಪಡಿಸಬಹುದಾದಂಥ ನಿಯಮಗಳೇನಾದರೂ ಇದ್ದರೆ ಅವುಗಳಿಗೆ ಒಳಪಟ್ಟು ಮತ್ತು ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 2022 (ಇಲ್ಲಿ ಇನ್ನು ಮುಂದೆ ತಿದ್ದುಪಡಿ ಅಧಿನಿಯಮವೆಂದು ಉಲ್ಲೇಖಿಸಿದೆ) ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗಾಗಿ ಗೊತ್ತುಪಡಿಸಬಹುದಾದಂಥ ಶುಲ್ಕಗಳೊಂದಿಗೆ ಮತ್ತು (5)ನೇ ಉಪ-ಪ್ರಕರಣದ ಮೇರಗೆ ಸಂದಾಯ ಮಾಡಬೇಕಾದ ಮೊತ್ತವನ್ನು ಸಂದಾಯ ಮಾಡಿದ ಮೇಲೆ, ಅಂಥ ನಮೂನೆಯಲ್ಲಿ ಅಂಥ ಭೂಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ ಮೇಲೆ ಮಂಜೂರು ಮಾಡುವುದಕ್ಕೆ 94ನೇ ಪ್ರಕರಣದಲ್ಲಿರುವುದಾವುದೂ ಅಡ್ಡಿಯಾಗತಕ್ಕದ್ದಲ್ಲ.

ಪರಂತು, ಅಂಥ ವ್ಯಕ್ತಿಯು ಈಗಾಗಲೇ ಹೊಂದಿರುವ ಭೂಮಿಯ ಜೊತೆಗೆ ಹಾಗೆ ಮಂಜೂರು ಮಾಡಿದ ಭೂಮಿಯು 'ಡಿ' ವರ್ಗದ ಅಥವಾ ಅದಕ್ಕೆ ಸಮನಾದ ಭೂಮಿಯು ಎರಡು ಹೆಕ್ಟರ್‌ಗಳನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು, ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ನಗರಗಳ ಮತ್ತು ನಗರ ಸಭೆಗಳ ಸರಹದ್ದುಗಳ ಒಳಗಿರುವ ಮತ್ತು ಅದರ (3)ನೇ ಅಂಕಣದ ಎದುರಿಗೆ ಮಾಡಿರುವ ನಮೂದುಗಳಲ್ಲಿ ನಿರ್ದಿಷ್ಟಪಡಿಸಿದಂಥ ಸರಹದ್ದುಗಳ ಅಂತರದೊಳಗಿರುವ ಪ್ರದೇಶಗಳಲ್ಲಿ ಯಾವುದೇ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ;

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 300, 23ನೇ ಫೆಬ್ರವರಿ 2023

**KARNATAKA LEGISLATIVE COUNCIL**
**ONE HUNDRED AND FIFTY SECOND SESSION**

# THE KARNATAKA LAND REVENUE (AMENDMENT) BILL, 2024
## (LA Bill No. 24 of 2024)
## (As passed by the Karnataka Legislative Assembly)

A Bill further to amend the Karnataka Land Revenue Act, 1964.

Whereas it is expedient further to amend the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the Seventy fifth year of the Republic of India, as follows:-

1. **Short title and commencement.-**(1) This Act may be called the Karnataka Land Revenue (Amendment) Act, 2024.

   (2) It shall come into force at once.

**2. Amendment of Section 94-A:-** In Section 94-A of Karnataka Land Revenue Act, 1964 (Karnataka Act 12 of 1964),-

(i) after sub-section (1) the following proviso shall be inserted, namely:-

"Provided that

(i) if the member of the Legislative Assembly of the respective Assembly Constituency has indicated in writing that they are unable or unwilling to be a member of the Committee, or

(ii)if the position of the Member of Legislative Assembly for that constituency is vacant, the State Government shall nominate any person as a member of the Committee of such Assembly Constituency."

(ii) for sub-section (2) , the following shall be substituted, namely:-

"The State Government shall appoint the Tahsildar of the taluk constituting the major part of that constituency on the basis of population as the Secretary of the committee."

(iii) in sub-section (2A),-

(a) for the word "taluk" the word "constituency" shall be substituted;

(b) the words "and another as the Secretary of the committee." Shall be omitted; and

(c) for the words "Deputy Commissioner" the words "State Government" shall be substituted.

(iv) in sub-section (4), the words "or any portion thereof" shall be omitted.

(v) in the first proviso to sub-section (4), for the word "person" the word "family" shall be substituted.

## STATEMENT OF OBJECTS AND REASONS

**(As appended to at the time of introduction)**

The present provision of 94A(1) of the Act provides that the member of the assembly to be one of the member of the committee formed to regularize the unauthorized cultivation of agriculture land concerned to the respective assembly constituency. (Bagar Hukum Committee)

But in some cases if the member of the concerned assembly constituency is not willing to be a member of the committee or if the seat of the member of the assembly is vacant then constituting the committee is delayed. The Hon'ble High Court has taken the serious note to remove the encroachment of the government land and directed to form the committee immediately.

Therefore, it is considered necessary to amend the section 94-A of the Karnataka Land Revenue Act, 1964 to make a provision for nomination of any person in the said committee by the State Government.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**KRISHNA BYREGOWDA**
Minister for Revenue

**K.R. MAHALAKSHMI**
Secretary
Karnataka Legislative Council

## ANNEXURE
## EXTRACT FROM THE KARNATAKA LAND REVENUE ACT, 1964
## (Karnataka Act 12 of 1964)

**XXX XXX XXX**

**94A. Regularisation of certain cases of unauthorised occupation by constituting committee etc.-** (1) Subject to such rules as may be prescribed, the State Government shall, by notification, constitute for each constituency of the Legislative Assembly a committee consisting of such number of members not exceeding five of whom one shall be a member of Legislative Assembly for the purpose of grant of land under sub-section (4).

(2) The Tahsildar of the concerned taluk shall be the Secretary of the committee.

(2A) The State Government may, if it is of the opinion that it is necessary, constitute one or more additional committees for a taluk for the purpose of grant of land under sub-section (4) consisting of such number not exceeding five, as may be prescribed and the State Government shall nominate from among the members one of them as the Chairman and another as the Secretary of the committee. When an additional committee is constituted, the Deputy Commissioner shall determine the jurisdictions of the committee and the additional committee and transfer the pending applications to the respective committee.

(3) The committee or additional committee shall follow such procedure as may be prescribed.

(4) Nothing in section 94 shall prevent the committee constituted under sub-section (1), or additional committee constituted under sub-section (2A) , but subject to such rules as may be prescribed, if any, to grant to the person liable to be evicted under that section, the land which he had unauthorisedly occupied prior to the first day of January, 2005 (hereinafter referred to as the said date) or any portion thereof, if he satisfies the prescribed conditions (including the extent of the land held and unauthorisedly occupied by him) and makes within a period of one year from the date of commencement of the Karnataka Land Revenue (Amendment) Act, 2022 (hereinafter referred to as the Amendment Act), an application for such grant in such form along with such fees as may be prescribed and on payment of the amount payable under sub-section (5):

Provided that the land so granted together with the land already held by such person, shall not exceed two hectares of _D‘ class of land or its equivalent thereto:

Provided further that no land shall be granted in the areas lying within the limits of Cities and City Municipalities specified in column (2) of the Table below and within the distance from such limits specified in the corresponding entries in column (3) thereof:

**XXX XXX XXX**

Govt. Press, Vikasa Soudha, Bengaluru, 23rd Feb, 2024, P7, W.D. , Copies 300